# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಸಾಲಿನಲ್ಲಿ 100 ಆಳಸಮುದ್ರ ಮೀನುಗಾರಿಕಾ ದೋಣಿಗಳಿಗೆ (Deep Sea Fishing Boats) ಪ್ರಧಾನಮಂತ್ರಿ "ಮತ್ಸ್ಯಸಿರಿ" ಎಂಬ ವಿಶೇಷ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:- ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: DoF-TECHO-FYP1/16/2022, ದಿನಾಂಕ: 09-03-2022.

******

ಕರ್ನಾಟಕ ರಾಜ್ಯ ಸರ್ಕಾರ ಮೀನುಗಾರಿಕೆ ನಿರ್ದೇಶನಾಲಯ
- 8 APR
ಬೆಂಗಳೂರು.

## ಪ್ರಸ್ತಾವನೆ

2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-62ರಲ್ಲಿ 300 ಕಿ.ಮೀ.ಗೂ ಹೆಚ್ಚು ಉದ್ದದ ಕರಾವಳಿ ತೀರವನ್ನು ಹೊಂದಿರುವ ಕರ್ನಾಟದಲ್ಲಿ ಪ್ರಸ್ತುತ ಬಹುತೇಕ ಮೀನು ಉತ್ಪಾದನೆಯು ತೀರ ಸಮೀಪದ ನೀರಿನಲ್ಲಿಯೇ ಆಗುತ್ತಿದ್ದು, ಆಳ ಸಮುದ್ರ ಮೀನುಗಾರಿಕೆಯಲ್ಲಿ ಸಾಮರ್ಥ್ಯ ವೃದ್ಧಿಗೆ ವಿಫುಲ ಅವಕಾಶಗಳಿವೆ. ಈ ನಿಟ್ಟಿನಲ್ಲಿ ಆಳಸಮುದ್ರ ಮೀನುಗಾರಿಕೆಯನ್ನು ಇನ್ನಷ್ಟು ಪ್ರಚುರ ಪಡಿಸಿ, ವಿಶಿಷ್ಟ ತಳಿಗಳ ಮೀನು ಮತ್ತು ಚಿಪ್ಪು ಮೀನುಗಳ ಉತ್ಪಾದನೆಯ ಮೂಲಕ ಮೀನುಗಾರರ ಆದಾಯವನ್ನು ಹೆಚ್ಚಿಸಲು ಸರ್ಕಾರ ಮುಂದಾಗಿದೆ. ಈ ಹಿನ್ನಲೆಯಲ್ಲಿ 100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ (Deep Sea Fishing Vessels DF) "ಮತ್ಸ್ಯ ಸಿರಿ" ಎಂಬ ವಿಶೇಷ ಯೋಜನೆ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ರೂಪಿಸಲಾಗುವುದು ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಏಕ ಕಡತ ಪತ್ರದಲ್ಲಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಕರಾವಳಿ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಮೀನುಗಾರಿಕೆ ಪ್ರಮುಖ ಪಾತ್ರ ವಹಿಸುತ್ತದೆ. ಕರ್ನಾಟಕದ ಕಡಲ ಮೀನು ಉತ್ಪಾದನೆಯು ಹೆಚ್ಚಾಗಿ 100 ಮೀಟರ್ ಆಳದವರೆಗಿನ ಪ್ರದೇಶದ ಸುತ್ತಲೂ ಕೇಂದ್ರೀಕೃತವಾಗಿದೆ ಮತ್ತು ಸುಮಾರು 90 ಪ್ರತಿ ಶತದಷ್ಟು ಹಿಡುವಳಿಯು 50 ಮೀ.ವರೆಗಿನ ಪ್ರದೇಶದಲ್ಲಿ ಬರುತ್ತದೆ. ಕಡಲ ಮೀನುಗಾರಿಕೆಯ ಸಾಮರ್ಥ್ಯದ ಇತ್ತೀಚಿನ ಮರುಮೌಲ್ಯ ಮಾಪನದಂತೆ ತೀರ ಸಮೀಪದ ನೀರಿನಲ್ಲಿ ಮೀನುಗಾರಿಕೆಯ ಒತ್ತಡವು ಗಣನೀಯವಾಗಿ ಏರಿದೆ ಮತ್ತು ಕೆಲವೇ ತಳಿಗಳು ಹೆಚ್ಚಿನ ಪ್ರಮಾಣದಲ್ಲಿ ಹಿಡುವಳಿಯಾಗುತ್ತಿವೆ ಕರಾವಳಿ ವಲಯದಲ್ಲಿ ಮತ್ತಷ್ಟು ಹೆಚ್ಚಳ ಮೀನುಗಾರಿಕೆಯ ಇಳುವರಿಯು ಗಣನೀಯವಾಗಿ ಹಾನಿಕಾರವಾಗುವುದು ಎಂದು ತಿಳಿಸಿರುತ್ತಾರೆ.

ಪೌಷ್ಟಿಕಾಂಶದ ಭದ್ರುತೆಗಾಗಿ ಪರ್ಯಾಯ ಸಂಪನ್ಮೂಲವನ್ನು ಕಂಡುಹಿಡಿಯುವ ಅನಿವಾರ್ಯತೆಯು ಅಗತ್ಯವಾಗಿರುತ್ತದೆ. ಕರ್ನಾಟಕ EEZ (Exclusive Economic Zone) ನ ಆಳವಾದ ನೀರಿನಲ್ಲಿ ತೊಡಗಿಸಿಕೊಳ್ಳುವ ಮೂಲಕ ಉತ್ಪಾದನೆಯನ್ನು ಹೆಚ್ಚಿಸುವ ವಿಫುಲ ಅವಕಾಶವಿದೆ. ಇದು non-conventional, un exploited ಮೀನುಗಳು ಮತ್ತು ಚಿಪ್ಪು

ಮೀನುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಈ ದಿಸೆಯಲ್ಲಿ ಆಳ ಸಮುದ್ರ ಮೀನುಗಾರಿಕೆಗಾಗಿ ಪ್ರಸ್ತುತವಿರುವ ಟ್ರಾಲರ್ ದೋಣಿಗಳನ್ನು ಆಳಸಮುದ್ರದಲ್ಲಿ ಮೀನುಗಾರಿಕೆ ಮಾಡುವಂತೆ ಉನ್ನತೀಕರಿಸುವುದು ಹಾಗೂ ಇರುವ ದೋಣಿಗಳನ್ನು ಸದ್ಬಳಕೆ ಮಾಡುವುದಲ್ಲದೆ ಮೀನುಗಾರಿಕೆ ದೋಣಿಗಳ ಸಂಖ್ಯೆಯನ್ನು ಹೆಚ್ಚಿಸದಂತೆ ನಿಗಾವಹಿಸ ಬಹುದಾಗಿದೆ. ಟ್ರಾಲರ್ ದೋಣಿಗಳನ್ನು ಆಳ ಸಮುದ್ರ ಮೀನುಗಾರಿಕೆ ದೋಣಿಗಳನ್ನಾಗಿ ವಿಶೇಷವಾಗಿ ಲಾಂಗ್ ಲೈನರ್ / ಗಿಲ್ ನೆಟ್ ನ್ನಾಗಿ ಪರಿವರ್ಧಿಸುವುದರಿಂದ ಆಳ ಸಮುದ್ರಕ್ಕೆ ಹೋಗಿ ಬರುವ ಪ್ರಯಾಣಕ್ಕೆ ಮಾತ್ರ ಡೀಸೆಲ್ ಉಪಯೋಗವಾಗಿ ಬಲೆ ಎಳೆಯುವುದಕ್ಕಾಗಿ ಬಳಕೆಯಾಗುವ ಡೀಸೆಲ್ ಉಳಿತಾಯವಾಗುವುದು. ಹಾಗಾಗಿ ಡೀಸೆಲ್ ಮೇಲಿನ ಖರ್ಚು ಕಡಿಮೆಯಾಗುವುದರಿಂದ ಮತ್ತು ಆಳ ಸಮುದ್ರ ಮೀನುಗಳಿಗೆ ಹೆಚ್ಚಿನ ಬೇಡಿಕೆ ಹಾಗು ಉತ್ತಮ ಬೆಲೆ ಇರುವುದರಿಂದ ಮೀನುಗಾರರು ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿಯಲ್ಲಿ ರಾಜ್ಯಕ್ಕೆ 2020-21 ಮತ್ತು 2021-22 ನೇ ಸಾಲಿಗೆ 14 ಆಳ ಸಮುದ್ರ ಮೀನುಗಾರಿಕೆ ಹಡಗುಗಳನ್ನು ಮಂಜೂರು ಮಾಡಿದೆ. ದೋಣಿಗೆ ಘಟಕ ವೆಚ್ಚ ರೂ. 120.00 ಲಕ್ಷ ಮತ್ತು ಸಾಮಾನ್ಯ ಮತ್ತು ಎಸ್‌ಸಿ/ಎಸ್‌ಟಿ/ಮಹಿಳಾ ವರ್ಗಗಳ ಫಲಾನುಭವಿಗಳಿಗೆ ಕ್ರಮವಾಗಿ 40% ಮತ್ತು 60% ರಷ್ಟು ಆರ್ಥಿಕ ನೆರವು ನೀಡಲಾಗುತ್ತಿದೆ ಹಾಗಾಗಿ ಪಿಎಂಎಂಎಸ್‌ವೈ ಮಾರ್ಗಸೂಚಿಗಳ ಪ್ರಕಾರ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ತಿಳಿಸಿರುತ್ತಾರೆ.

ಮುಂದುವರೆದು, ಪಾಲುದಾರರು ಮತ್ತು ದೋಣಿ ನಿರ್ಮಾಣ ಏಜೆನ್ಸಿಗಳೊಂದಿಗೆ ಚರ್ಚಿಸಿದ ನಂತರ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಇರುವ ದೋಣಿ ನಿರ್ಮಾಣಕ್ಕೆ ಸುಮಾರು ರೂ.150.00 ಲಕ್ಷಗಳ ವೆಚ್ಚವಾಗುತ್ತದೆಯೆಂದುತಿಳಿಸಿರುತ್ತಾರೆ. ಈ ಯೋಜನೆಯಡಿ ನಿಗದಿಯಾಗಿರುವ ಫಲಾನುಭವಿಯ ಕೊಡುಗೆಯು ಸಾಮಾನ್ಯ ವರ್ಗಕ್ಕೆ ರೂ.72.00 ಲಕ್ಷ ಮತ್ತು ಎಸ್‌ಸಿ/ಎಸ್‌ಟಿ/ಮಹಿಳಾ ವರ್ಗಗಳಿಗೆ ರೂ.48.00 ಲಕ್ಷಗಳಾಗಿದ್ದು, ಈ ಮೊತ್ತವು ದೊಡ್ಡ ಮೊತ್ತವಾಗಿದ್ದು ಹೆಚ್ಚಿನ ಸಂದರ್ಭಗಳಲ್ಲಿ ಫಲಾನುಭವಿಗಳಿಂದ ಸ್ವಯಂ ಹಣಕಾಸು ವ್ಯವಸ್ಥೆ ಮಾಡಲಾಗುವುದಿಲ್ಲ. ಫಲಾನುಭವಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಗಣಿಸಿ ಮತ್ತು ಆಳಸಮುದ್ರ ದ ಸಂಪನ್ಮೂಲಗಳ ಸುಸ್ಥಿರ ಪೋಷಣೆಗಾಗಿ DSFVಯ ಘಟಕ ವೆಚ್ಚವನ್ನು ರೂ.150.00 ಲಕ್ಷಗಳಿಗೆ ಹೆಚ್ಚಿಸಲು ಪ್ರಸ್ತಾಪಿಸುತ್ತಾ, ಈ ಹೆಚ್ಚುವರಿ ವೆಚ್ಚದ (ರೂ. 30.00 ಲಕ್ಷ) ಶೇ.50ರಷ್ಟು ಹಾಗೂ ಗರಿಷ್ಠ ರೂ.15.00ಲಕ್ಷಗಳಿಗೆ ಒಳಪಟ್ಟು ಹೆಚ್ಚುವರಿ ಆರ್ಥಿಕ ಪ್ರೋತ್ಸಾಹ ಧನವಾಗಿ ರಾಜ್ಯ ಸರ್ಕಾರ ನೀಡುವುದು ಸೂಕ್ತ ಎಂದು ತಿಳಿಸಿರುತ್ತಾರೆ. ಈ ನಿಟ್ಟಿನಲ್ಲಿ ಈ ಯೋಜನ ಅನುಷಾನಗೊಳಿಸಲು PMSSY ಯೋಜನೆಯಡಿ ಸಹಾಯಧನ ಮೊತ್ತವು ರಾಜ್ಯದ ಪಾಲಿಗೆ ಹೆಚ್ಚುವರಿಯಾಗಿ ಗರಿಷ್ಠ ರೂ.15.00 ಕೋಟಿ ಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಯೋಜನೆಯಡಿ ಕೇಂದ್ರ ಸರಕಾರವು ನಿಗದಿಪಡಿಸಿರುವ ಘಟಕ ವೆಚ್ಚ ರೂ.120.00 ಲಕ್ಷಗಳಿಗೆ ರಾಜ್ಯವು ಗರಿಷ್ಟ ರೂ.15.00 ಲಕ್ಷಗಳನ್ನು ಹೆಚ್ಚುವರಿಯಾಗಿ ಸೇರಿಸಿ ಒಟ್ಟಾರೆಯಾಗಿ ಘಟಕ ವೆಚ್ಚ ರೂ.150.00 ಲಕ್ಷಗಳಲ್ಲಿ ಈ ಕೆಳಗಿನ ಕೋಷ್ಟಕದಂತೆ ಸಹಾಯಧನ ವಿತರಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿರುತ್ತಾರೆ.

**ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ನೀಡಲಾಗುವ ಆರ್ಥಿಕ ನೆರವು**

(ರೂ. ಲಕ್ಷ)

| ಘಟಕ ವೆಚ್ಚ | PMMSY ಸಹಾಯಧನ ದಲ್ಲಿ ಕೇಂದ್ರ ಪಾಲು | PMMSY ಸಹಾಯಧನ ದಲ್ಲಿ ರಾಜ್ಯದ ಪಾಲು | ರಾಜ್ಯದ ಹೆಚ್ಚುವರಿ ಸಹಾಯ ಧನ | ಒಟ್ಟು ಸಹಾಯ ಧನ | ಫಲಾನುಭವಿ ಪಾಲು |
|---|---|---|---|---|---|
| 130.00 | 28.80 | 19.20 | 5.00 | 53.00 | 77.00 |
| 140.00 | 28.80 | 19.20 | 10.00 | 58.00 | 82.00 |
| 150.00 | 28.80 | 19.20 | 15.00 | 63.00 | 87.00 |

**ಮಹಿಳೆ/ ಪ.ಜಾ/ ಪ ಪಂ ವರ್ಗದ ಫಲಾನುಭವಿಗಳಿಗೆ ನೀಡಲಾಗುವ ಆರ್ಥಿಕ ನೆರವು**

(ರೂ. ಲಕ್ಷ)

| ಘಟಕ ವೆಚ್ಚ | PMMSY ಸಹಾಯಧನ ದಲ್ಲಿ ಕೇಂದ್ರ ಪಾಲು | PMMSY ಸಹಾಯಧನ ದಲ್ಲಿ ರಾಜ್ಯದ ಪಾಲು | ರಾಜ್ಯದ ಹೆಚ್ಚುವರಿ ಸಹಾಯ ಧನ | ಒಟ್ಟು ಸಹಾಯ ಧನ | ಫಲಾನುಭವಿ ಪಾಲು |
|---|---|---|---|---|---|
| 130.00 | 43.20 | 28.80 | 5.00 | 77.00 | 53.00 |
| 140.00 | 43.20 | 28.80 | 10.00 | 82.00 | 58.00 |
| 150.00 | 43.20 | 28.80 | 15.00 | 87.00 | 63.00 |

ಈ ಹಿನ್ನಲೆಯಲ್ಲಿ ಕರಾವಳಿ ಮೀನುಗಾರಿಕೆ ಅಭಿವೃದ್ಧಿಗಾಗಿ ""ಮತ್ಸ್ಯ ಸಿರಿ"" ಎಂಬ ಹೊಸ ಕಾರ್ಯಕ್ರಮವನ್ನು "ನೀಲಿ ಕ್ರಾಂತಿ / PMMSY - ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (ಕೇಂದ್ರ ಪುರಸ್ಕೃತ ಯೋಜನೆ)" ಎಂಬ ಯೋಜನೆಯನ್ನು ಅನುಬಂಧದಲ್ಲಿ ನೀಡಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಹಾಗೂ ಸದರಿ ಯೋಜನೆಗೆ ತಗಲುವ ವೆಚ್ಚವನ್ನು 2022-23 ನೇ ಸಾಲಿನ ಲೆಕ್ಕ ಶೀರ್ಷಿಕೆ 2405-00-101-0-59 (106/422/423) ಅಡಿ ಒದಗಿಸಿರುವ ರೂ.2350.00 ಲಕ್ಷಗಳ ಅನುದಾನದಿಂದ ಭರಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-98 ಮೀಇಯೋ 2022, ಬೆಂಗಳೂರು ದಿನಾಂಕ: 07-04-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-62 ರಂತೆ, 100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ (Deep Sea Fishing Boats) ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯೊಂದಿಗೆ ಸಂಯೋಜಿಸಿ "ಮತ್ಸ್ಯ ಸಿರಿ" ಎಂಬ ವಿಶೇಷ ಯೋಜನೆಯನ್ನು ಕೇಂದ್ರ ಸರ್ಕಾರದ ಪಿಎಂಎಂಎಸ್‌ವೈ ಮಾರ್ಗಸೂಚಿಗಳನ್ವಯ ಹಾಗೂ ಈ ಆದೇಶದ **ಅನುಬಂಧ**ದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಈ ಯೋಜನೆಗೆ ತಗಲುವ ವೆಚ್ಚವನ್ನು 2022-23 ನೇ ಸಾಲಿನ ನೀಲಿ ಕ್ರಾಂತಿ/PMMSY-ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (ಕೇಂದ್ರ ಪುರಸ್ಕೃತ ಯೋಜನೆ) ಲೆಕ್ಕ ಶೀರ್ಷಿಕೆ 2405-00-101-0-59 (106/422/423) ಯೋಜನೆಯಡಿ ಒದಗಿಸಿರುವ ರೂ.2350.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಸದರಿ ಯೋಜನೆಯನ್ನು ಕೇಂದ್ರ ಪುರಸ್ಕೃತ ಯೋಜನೆಯ ಅನುದಾನದೊಂದಿಗೆ ಹೆಚ್ಚುವರಿಯಾಗಿ ಬೇಕಾಗಿರುವ ಅನುದಾನವನ್ನು ವಾಣಿಜ್ಯ ಬ್ಯಾಂಕ್ ಗಳ ಸಹಯೋಗದೊಂದಿಗೆ ಮೀನುಗಾರರಿಗೆ ಸಾಲ ಸೌಲಭ್ಯವನ್ನು ನೀಡಲು ಪ್ರೋತ್ಸಾಹಿಸಲು ಕ್ರಮವಹಿಸುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್-ಪಿಜಿಒ/7/2022, ದಿನಾಂಕ: 24-03-2022 ರಲ್ಲಿ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/53/ವೆಚ್ಚ-4/2022, ದಿನಾಂಕ: 05-04-2022 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 7/4/2022
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

07/04/2022

ಇವರಿಗೆ

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.

3. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4. ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7. ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10. ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
11. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

ಪ್ರತಿಯನ್ನು

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.

ಆದೇಶ ಸಂಖ್ಯೆ: ಪಸಂಮೀ ಇ-98 ಮೀಇಯೋ 2022, ಬೆಂಗಳೂರು ದಿನಾಂಕ: 07-04-2022 ರ ಅನುಬಂಧ

## ಷರತ್ತು ಮತ್ತು ನಿಬಂಧನೆಗಳು

1. ಸಾಂಪ್ರದಾಯಿಕ ಮೀನುಗಾರರು ಮತ್ತು ಸಂಘಗಳು / ಸ್ವಸಹಾಯ ಸಂಘಗಳು / FFPO ಗಳು ಮಾತ್ರ ಈ ಯೋಜನೆಯಡಿ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತವೆ.
2. ಅರ್ಜಿ ಸಲ್ಲಿಸುವ ಫಲಾನುಭವಿಗಳು REAL CRAFT ಯಡಿ, ನೋಂದಣಿ ಪ್ರಮಾಣಪತ್ರ, ಮೀನುಗಾರಿಕೆ ಪರವಾನಗಿ, QR ಕೋಡ್ ಉಳ್ಳ ಆಧಾರ್‌ಕಾರ್ಡ್ ಕಡ್ಡಾಯವಾಗಿ ಹೊಂದಿರತಕ್ಕದ್ದು.
3. ಸರ್ಕಾರದ ನೆರವು ಒಬ್ಬರಿಗೆ 01 ಘಟಕಕ್ಕೆ, ಅಥವಾ ಗುಂಪು / FFPO ಗಳಿಗೆ ಗರಿಷ್ಠ 6 ಘಟಕಗಳಿಗೆ ಸೀಮಿತಗೊಳಿಸಲಾಗಿದೆ.
4. ಆಳ ಸಮುದ್ರ ಮೀನುಗಾರಿಕೆ ಬೋಟ್‌ಗಳು ದೋಣಿಯಲ್ಲಿ ಲಾಂಗ್ ಲೈನಿಂಗ್ ಮತ್ತು ಗಿಲ್ ನೆಟ್ಟಿಂಗ್ ಬೇಕಾದ ಮತ್ತು ಹಿಡುವಳಿ ಮಾಡಿದ ಮೀನಿನ ತಾಜಾತನವನ್ನು ಸಂರಕ್ಷಿಸಲು ಬೇಕಾದ ಶೈತೀಕರಿಸಿದ ಶೇಖರಣಾ ಸೌಲಭ್ಯವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಹೊಂದಿರತಕ್ಕದ್ದು.
5. ಆಳ ಸಮುದ್ರ ಮೀನುಗಾರಿಕೆ ದೋಣಿಗಳು ಕಡ್ಡಾಯವಾಗಿ ಸೂಕ್ತ ಸಂವಹನ ಸಾಧನಗಳನ್ನು, AIS ಟ್ರಾನ್ಸ್ ಪಾಂಡರ್‌ಗಳು ಮತ್ತು ಇತರೆ ಸುರಕ್ಷಿತ ನ್ಯಾವಿಗೇಷನಲ್ ಉಪಕರಣಗಳು, ಇತ್ಯಾದಿಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.
6. ಯೋಜನೆಯಡಿ ದೋಣಿ ನಿರ್ಮಾಣ ಮಾಡಲು ಉದ್ದೇಶಿಸಿರುವವರು ಇಲಾಖೆ Empanel ಮಾಡಿದ ಬೋಟ್ ಬಿಲ್ಡಿಂಗ್‌ಯಾರ್ಡ್ ನಲ್ಲಿಯೇ ಆಳ ಸಮುದ್ರ ದೋಣಿಯನ್ನು ನಿರ್ಮಿಸತಕ್ಕದ್ದು.
7. ಈಗಾಗಲೇ ಅಸ್ತಿತ್ವದಲ್ಲಿರುವ Bottom Trawler ಗೆ ಬದಲಿಗೆ ಹೊಸದಾಗಿ ನಿರ್ಮಿಸುವ ಆಳ ಸಮುದ್ರ ಮೀನುಗಾರಿಕೆ ಬೋಟ್‌ನ್ನು ನಿರ್ಮಿಸುವುದು.
8. ಹೊಸದಾಗಿ ಆಳ ಸಮುದ್ರ ಮೀನುಗಾರಿಕೆ ಬೋಟ್‌ನ್ನು ನಿರ್ಮಿಸುವವರು ಹಳೆಯ ದೋಣಿಯನ್ನು ನಿಯಮಾನುಸಾರ SCRAP ಮಾಡಿರಬೇಕು.
9. ಹೊಸದಾಗಿ ನಿರ್ಮಿಸುವ ಆಳ ಸಮುದ್ರ ಮೀನುಗಾರಿಕೆ ಬೋಟ್‌ಗಳು ಕಡ್ಡಾಯವಾಗಿ ಜೈವಿಕ ಶೌಚಾಲಯವನ್ನು ಹೊಂದಿರತಕ್ಕದ್ದು.
10. ಈ ಯೋಜನೆಯ ಫಲಾನುಭವಿಗಳು ಕಡ್ಡಾಯವಾಗಿ ಮೀನು ಹಿಡುವಳಿ ವಿವರ ಮತ್ತು ಪ್ರಯಾಣದ ವಿವರಗಳನ್ನು ಪ್ರತೀ ಪ್ರಯಾಣದ ಕೊನೆಯಲ್ಲಿ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ ಸೂಕ್ತ ದಾಖಲಾತಿಯೊಂದಿಗೆ ಸಲ್ಲಿಸತಕ್ಕದ್ದು.
11. ಆಳ ಸಮುದ್ರ ಮೀನುಗಾರಿಕೆ ದೋಣಿ ನಿರ್ಮಾಣ ಮಾಡುವ ಫಲಾನುಭವಿಯು ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ನೀಡಿರುವ ಮೂರು ಮಾದರಿಗಳಲ್ಲಿ ಯಾವುದಾದರೊಂದು ಮಾದರಿಯನ್ನೇ ಆಯ್ಕೆ ಮಾಡತಕ್ಕದ್ದು.

ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಆಳ ಸಮುದ್ರ ಮೀನುಗಾರಿಕೆ ದೋಣಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಂದರು ಮತ್ತು ಜಲಸಾರಿಗೆ ಸಚಿವಾಲಯ ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: NO. SY-18020/1/2021 SBR ದಿನಾಂಕ: 08-02-2021ರಲ್ಲಿ ನೀಡಿರುವ standard operating procedure ನ್ನು ಅನುಸರಿಸತಕ್ಕದ್ದು.

Kamakshi U.A 7/4/2022
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

07/04/2022